ಪ್ರಬಂಧ

# ಹೊಸಹೊಸ ಅನುಭವ ಕೊಡುವ ರೈಲು ಪಯಣ





**ಸಹನಾ ಕಾಂತಬೈಲು**

ಕಲೆ: ಗುಜ್ಜಾರ್

ನಾನು ವೋಲ್ವೋ, ಸ್ಲೀಪರ್ ಬಸ್ಸಿನಲ್ಲಿ ಪಯಣಿಸಿದ್ದೇನೆ. ಕೋಟಿ ಬೆಲೆಬಾಳುವ ಐಷಾರಾಮಿ ಕಾರಿನಲ್ಲೂ ಸಂಚರಿಸಿದ್ದೇನೆ. ವಿಮಾನದಲ್ಲೂ ಹಾರಿದ್ದೇನೆ. ಆದರೆ ನನಗೆ ಎಲ್ಲಕ್ಕಿಂತ ಹೆಚ್ಚು ಸುಖ ನೀಡುವುದು ರೈಲು ಪ್ರಯಾಣ. ರೈಲಿನಲ್ಲಿ ಎಷ್ಟೇ ದೂರ ಸಂಚರಿಸಲಿ ಆಯಾಸವಾಗುವುದಿಲ್ಲ. ರೈಲಿನಲ್ಲಿ ಇರುವ ಸೌಕರ್ಯ ಒಂದೇ? ಎರಡೇ? ರೈಲು ಎಂದರೆ ಅದೊಂದು ಚಲಿಸುವ ಮನೆ.

ಹಲ್ಲುಜ್ಜಬೇಕಾದರೆ ಬೇಸಿನ್ ವ್ಯವಸ್ಥೆ ಇದೆ. ಮಲ, ಮೂತ್ರ ಬಂದರೆ ಟಾಯ್ಲೆಟ್ ಇದೆ. ಹಸಿವೆಯಾದರೆ ಊಟ, ತಿಂಡಿ ತಂದುಕೊಡುವವರು ಇದ್ದಾರೆ. ಬಾಯಾರಿಕೆಯಾದರೆ ನೀರು, ಕಾಫಿ, ಟೀ ಸರಬರಾಜು ಮಾಡುವವರು ಇದ್ದಾರೆ. ಮೊಬೈಲ್ ಚಾರ್ಜ್ ಮುಗಿದರೆ ಚಾರ್ಜ್ ಮಾಡಲು ಪ್ಲಗ್ ಇದೆ. ಸೆಕೆಯಾದರೆ ತಲೆ ಮೇಲೆ 24 ಗಂಟೆಯೂ ತಿರುಗುವ ಫ್ಯಾನ್ ಇದೆ. ಬೆಳಕು ಬೇಕೆಂದರೆ ಸ್ವಿಚ್ ಹಾಕಿದರೆ ಸಾಕು ಲೈಟ್ ಉರಿಯುತ್ತದೆ. ರಾತ್ರಿ ವೇಳೆ ರೈಲಿನಲ್ಲಿ, ಮನೆಯಲ್ಲಿ ಮಲಗುವಂತೆ ಬಟ್ಟೆ ಹೊದೆದು ಕಾಲು ಬಿಡಿಸಿ ಆರಾಮವಾಗಿ ಮಲಗಬಹುದು. ರೈಲ್ವೇ ಸ್ಟೇಷನ್‌ನಲ್ಲಂತೂ ಹೆಂಗಸರಿಗೆ ಪ್ರತ್ಯೇಕ ವೈಟಿಂಗ್ ರೂಮ್, ಸ್ನಾನದ ಕೋಣೆ ಇರುತ್ತದೆ. ಇಷ್ಟೆಲ್ಲ ಸೌಲಭ್ಯಗಳು ಇದ್ದರೂ ಉಳಿದ ಎಲ್ಲಾ ಬಸ್ಸು, ಕಾರು, ವಿಮಾನ, ಹಡಗು ಪ್ರಯಾಣಗಳಿಗಿಂತ ರೈಲು ಪ್ರಯಾಣಕ್ಕೆ ಅತ್ಯಂತ ಕಡಿಮೆ ದರ. ಹೆಚ್ಚು ಸುರಕ್ಷಿತವೂ ರೈಲು ಪಯಣವೇ.

ನಾನು ರೈಲಿನಲ್ಲಿ ಇಲ್ಲಿಂದ ಸಾವಿರಾರು ಕಿ.ಮೀ.